ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸ್ಥಳದಲ್ಲಿ 20 ಎಕರೆ 30 ಗುಂಟೆ ಜಮೀನನ್ನು ಕೈಗಾರಿಕಾ ವಸಾಹತು ಸ್ಥಾಪಿಸುವ ಉದ್ದೇಶಕ್ಕಾಗಿ ದಿನಾಂಕ 10–4–1992ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಸ್ವಾಧೀನ ಪಡೆಯಲಾಗಿದೆ.

ಆ) ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿಗಳು, ನೀರು ಸರಬರಾಜು, ವಿದ್ಯುತ್ ಸರಬರಾಜು ಇತ್ಯಾದಿ ಸೌಕರ್ಯಗಳೊಂದಿಗೆ ನಿವೇಶನಗಳ ಅಭಿವೃದ್ಧಿ ಪಡಿಸುವ ಮುನ್ನ, ಅಗತ್ಯ ಬೇಡಿಕೆ ಸಮೀಕ್ಷೆಯನ್ನು ಹಲವಾರು ಬಾರಿ ನಡೆಸಲಾಗಿ (1996, 1997, 1998) ಯಾವ ಪ್ರತಿಕ್ರಿಯೆಯೂ ಬರಲಿಲ್ಲ. 2000ನೇ ಇಸವಿಯಲ್ಲಿ ನಡೆಸಿದಾಗ ಅಲ್ಪ ಪ್ರತಿಕ್ರಿಯೆ (32 ಭಾವಿ ಉದ್ದಿಮೆದಾರರಿಂದ) ಬಂದಿರುತ್ತದೆ. ಈ ಮಧ್ಯೆ ರಾಷ್ಟ್ರೀಯ ಹೆದ್ದಾರಿ ಅಗಲೀಕರಣದ ಭೂಸ್ವಾಧೀನ ಪ್ರಕ್ರಿಯೆಯೂ ಇದ್ದು, ಅದಾದ ನಂತರ ಮತ್ತೊಮ್ಮೆ ಅಗತ್ಯ ಬೇಡಿಕೆ ಸಮೀಕ್ಷೆ ನಡೆಸಿ, ಉಳಿದ ಜಮೀನಿನಲ್ಲೆ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿ ಪಡಿಸಲಾಗುವುದು. ಹಾಗೂ ಮಳಿಗೆ / ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

2649 (3107) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದ ಅಂಬೇಡ್ಕರ್ ಭವನಕ್ಕೆ ಈವರೆಗೆ ವೆಚ್ಚವಾಗಿರುವ ಹಣ ಎಷ್ಟು;

ಆ) ಭವನ ಪೂರ್ಣಗೊಳ್ಳಲು ಅಗತ್ಯವಿರುವ ಹಣವೆಷ್ಟು;

ಇ) ಯಾವಾಗ ಭವನ ಉದ್ಘಾಟನೆಯಾಗುತ್ತದೆ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಇದುವರೆಗೂ ಒಟ್ಟು ರೂ. 83.10 ಲಕ್ಷಗಳು ಖರ್ಚಾಗಿರುತ್ತದೆ.

ಆ) ಕರ್ನಾಟಕ ಭೂ ಸೇವಾ ನಿಗಮ ಶಿವಮೊಗ್ಗ ಇವರು ರೂ. 99.90 ಲಕ್ಷಗಳಿಗೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಿರುತ್ತಾರೆ. ಸರ್ಕಾರದ ಆದೇಶ (ಸಂ:ಸಕಇ 10 ಪಕವಿ 1998, ದಿನಾಂಕ 29–7–2002ರ ಪ್ರಕಾರ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ನಿರ್ಮಿಸುವ ಪ್ರತಿ ಭವನಕ್ಕೆ ನಿಗದಿಪಡಿಸಿದ ಅಂದಾಜು ಮೊತ್ತ ರೂ.40.00 ಲಕ್ಷಗಳು ಇದರಲ್ಲಿ ರೂ.10.00 ಲಕ್ಷಗಳನ್ನು ನಿರ್ಮಾಣದ ಸಲುವಾಗಿ ಇಲಾಖೆಯಿಂದ ನೀಡಬೇಕಾಗಿರುತ್ತದೆ. ಅದರಂತೆ,

ಸರ್ಕಾರದ ವತಿಯಿಂದ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ನಿರ್ಮಿಸಲಿರುವ ಅಂಬೇಡ್ಕರ್ ಭವನಕ್ಕೆ ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಉಳಿದ ಹಣವನ್ನು ಸ್ಥಳೀಯವಾಗಿ ಸಂಗ್ರಹಿಸಿಕೊಂಡು ಪೂರ್ಣಗೊಳಿಸಬೇಕಾಗಿರುತ್ತದೆ.

ಇ) ಕಟ್ಟಡ ಪೂರ್ಣಗೊಂಡ ನಂತರ ಶೀಘ್ರವಾಗಿ ಉದ್ಘಾಟನೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

2650 (3108) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಪ್ರಧಾನಮಂತ್ರಿಗಳ ರೋಜಗಾರ್ ಯೋಜನೆಯಡಿ ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಎಷ್ಟು ಜನ ನಿರುದ್ಯೋಗಿಗಳಿಗೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ನೀಡಲಾಗಿದೆಯೇ;

ಆ) ಯಾವ ಯಾವ ಬ್ಯಾಂಕಿನಿಂದ ಎಷ್ಟು ಜನರಿಗೆ ಸಾಲ ನೀಡಿದೆ;

ಇ) ಕೆಲವು ಬ್ಯಾಂಕುಗಳು ಸಾಲ ನೀಡಲು ನಿರಾಕರಿಸಿದವರ ಮೇಲೆ ಸರ್ಕಾರದ ಕ್ರಮವೇನು; (ಬ್ಯಾಂಕುದಾರರ ಪಟ್ಟಿ ನೀಡುವುದು);

ಈ) ಶಿವಮೊಗ್ಗ ನಗರದಲ್ಲಿ ಎಷ್ಟು ಜನ ನಿರುದ್ಯೋಗಿಗಳು ಸಾಲ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಿದ್ದಾರೆ ಹಾಗೂ ಈ ಪೈಕಿ ಸಾಲ ನೀಡಲು ಬಾಕಿ ಇರುವ ಅರ್ಜಿಗಳೆಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) 2004–05ನೇ ಸಾಲಿನ ಶಿವಮೊಗ್ಗ ನಗರದಲ್ಲಿ 296 ಗುರಿ ನಿಗದಿ ಪಡಿಸಿದ್ದು, ದಿನಾಂಕ 15–3–2005 ರವರೆಗೆ 233 ಅಭ್ಯರ್ಥಿಗಳಿಗೆ ಸಾಲ ಮಂಜೂರಾತಿ ನೀಡಲಾಗಿದೆ.

ಆ) ಪಟ್ಟಿ ಲಗತ್ತಿಸಿದೆ.

ಇ) ಕೆಲವು ಬ್ಯಾಂಕುಗಳು ಸಾಲ ನೀಡಲು ನಿರಾಕರಿಸಿರುವ ಬಗ್ಗೆ ಜಿಲ್ಲಾ ಮಟ್ಟದ ಬ್ಯಾಂಕುಗಳ ಸಮನ್ವಯ ಸಮಿತಿ ಹಾಗೂ ಏಕಗವಾಕ್ಷಿ ಸಭೆಗಳಲ್ಲಿ ಚರ್ಚಿಸಲಾಗಿದೆ. ಅಲಹಾಬಾದ್ ಬ್ಯಾಂಕ್, ವೈಶ್ಯ ಬ್ಯಾಂಕ್ ಹಾಗೂ ಸೌತ್ ಇಂಡಿಯನ್ ಬ್ಯಾಂಕ್ ಶಾಖೆಗಳು ಇದುವರೆಗೂ ಪ್ರಧಾನಮಂತ್ರಿ ರೋಜಗಾರ್ ಯೋಜನೆ ಅಡಿಯಲ್ಲಿ ಯಾವುದೇ ಸಾಲ ಮಂಜೂರು